ಅ) ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಮೂರು ಸಮಿತಿ ರಚಿಸಿರುವುದು ನಿಜವೆ;

ಆ) ಈ ಪೈಕಿ ಹೆಳವ, ಹೊಳವ, ಅನಾದಿ, ಪಿಚ್ಚಿಗುಂಟಲು ಮುಂತಾದ ಜಾತಿಗಳ ಬಗ್ಗೆ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯ ಸಮಿತಿ ವರದಿಯನ್ನು ಸರ್ಕಾರಕ್ಕೆ ನೀಡಿರುವುದು ನಿಜವೆ;

ಇ) ಸದರಿ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣವೇನು, ಯಾವಾಗ ಕಳುಹಿಸಲಾಗುವುದು ನಿಖರವಾಗಿ ತಿಳಿಸುವುದು.

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ಈ ಬಗ್ಗೆ ಸರ್ಕಾರ ಒಂದು ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಸಲಹೆ ಮೇರೆಗೆ ಮೂರು ಉಪಸಮಿತಿಗಳನ್ನು ರಚಿಸಲಾಗಿದೆ.

ಆ) ಶ್ರೀ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯ ಉಪಸಮಿತಿಯು ವರದಿಯನ್ನು ಮುಖ್ಯ ಸಮಿತಿಗೆ ಸಲ್ಲಿಸಿದೆ.

ಇ) ಮುಖ್ಯ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ. ಸರ್ಕಾರಕ್ಕೆ ವರದಿ ಬಂದ ಕೂಡಲೇ ಇದನ್ನು ಪರಿಶೀಲಿಸಿ ಅರ್ಹವೆಂದು ಕಂಡು ಬಂದ ಜಾತಿಗಳನ್ನು ಕೇಂದ್ರ ಸರ್ಕಾರಕ್ಕೆ ಸೂಕ್ತವಾಗಿ ಶಿಫಾರಸ್ಸು ಮಾಡಲಾಗುವುದು.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗಿರಿಜನ ನಿರ್ದೇಶನಾಲಯ ಸ್ಥಾಪನೆ

1116 (1920): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಗಿರಿಜನರು ವಾಸವಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಜಿಲ್ಲಾವಾರು ಗಿರಿಜನರ ಸಂಖ್ಯೆ ಎಷ್ಟು ತಿಳಿಸಿ;

ಇ) ಗಿರಿಜನ ಉಪಯೋಜನೆಯನ್ನು ಪ್ರತಿ ಜಿಲ್ಲೆಗೂ ವಿಸ್ತರಿಸಲು ಸಾಧ್ಯವೇ, ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು, ಆದೇಶಗಳೊಂದಿಗೆ ತಿಳಿಸಿ.

ಈ) ಪ್ರತಿ ಜಿಲ್ಲೆಯಲ್ಲಿ ಗಿರಿಜನರು ವಾಸಿಸುವ ಗ್ರಾಮ, ತಾಲ್ಲೂಕು, ಗುರುತಿಸಿ ಘೋಷಿಸಲಾಗಿದೆಯೇ ತಿಳಿಸಿ: ಇಲ್ಲದಿದ್ದಲ್ಲಿ ಕಾರಣವೇನು, ಯಾವ ವೈಜ್ಞಾನಿಕ ಪದ್ಧತಿ ಅನುಸರಿಸಿದ್ದೀರಿ ತಿಳಿಸಿ.

ಉ) ಆಂಧ್ರಪ್ರದೇಶ, ಮಹಾರಾಷ್ಟ್ರಗಳ ರಾಜ್ಯದಂತೆ ಪ್ರತ್ಯೇಕ ಗಿರಿಜನ ನಿರ್ದೇಶನಾಲಯ ಸ್ಥಾಪನೆಗೆ ಸರ್ಕಾರದ ಅಭಿಪ್ರಾಯವೇನು ? ಯಾವಾಗ ಪ್ರಾರಂಭಿಸಲಾಗುವುದು ಸ್ಪಷ್ಟವಾಗಿ ತಿಳಿಸಿ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ನಿಜ.

ಆ) 1991ರ ಜನಗಣತಿಯಂತೆ ಪರಿಶಿಷ್ಟ ವರ್ಗದವರ ಜಿಲ್ಲಾವಾರು ಜನಸಂಖ್ಯೆಯ ವಿವರವನ್ನು ಅನುಬಂಧದಲ್ಲಿ ತೋರಿಸಿದೆ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಪ್ರತಿ ಜಿಲ್ಲೆಯಲ್ಲಿ ಘೋಷಿಸಲಾಗಿರುವುದಿಲ್ಲ. ಆದರೆ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಮತ್ತು ಮೈಸೂರು ಜಿಲ್ಲೆಗಳನ್ನು ಒಳಗೊಂಡಂತೆ ಐದು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಪ್ರದೇಶಗಳ ಜೊತೆಗೆ ಬೆಂಗಳೂರು, ಮಂಡ್ಯ, ತುಮಕೂರು, ಹಾಸನ, ಕೋಲಾರ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿನ ಒಟ್ಟು 43 ಗಿರಿಜನ ಕಾಲೋನಿಗಳನ್ನು ಗುರುತಿಸಿ ಆದೇಶ ನೀಡಲಾಗಿದೆ. ನಾಯಕ್, ನಾಯ್ಕ, ಬೇಡ, ಬೇಡರ್ ಹಾಗೂ ವಾಲ್ಮೀಕಿ ಪಂಗಡದವರನ್ನು ಕೇಂದ್ರ ಸರ್ಕಾರವು 19-4-91ರಿಂದ ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಸೇರಿಸಿರುವುದರಿಂದ ಪ್ರತಿ ಜಿಲ್ಲೆಯಲ್ಲಿಯೂ ಗಿರಿಜನರನ್ನು ಗುರುತಿಸಿ ಅವರಿಗೆ ಸವಲತ್ತುಗಳನ್ನು ಒದಗಿಸುವಂತೆ ಎಲ್ಲಾ ಜಿಲ್ಲಾ ಪರಿಷತ್‌ಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳಿಗೆ ತಿಳಿಸಲಾಗಿದೆ ಜನಗಣತಿ ಹಾಗೂ ಕುಟುಂಬದ ಸಮೀಕ್ಷೆ ಆಧಾರದ ಮೇಲೆ ಗಿರಿಜನರನ್ನು ಗುರುತಿಸಲಾಗುತ್ತಿದೆ.

ಉ) ಪರಿಶಿಷ್ಟ ವರ್ಗದವರ ಸಂಖ್ಯಾ ಪ್ರಮಾಣ ಕಡಿಮೆ ಇರುವುದರಿಂದ (ಶೇಕಡ 4.26) ಇವರಿಗೇ ಪ್ರತ್ಯೇಕ ನಿರ್ದೇಶನಾಲಯ ಆರಂಭಿಸುವ ಆಲೋಚನೆ ಸದ್ಯಕ್ಕೆ ಇಲ್ಲ.

ಅನುಬಂಧ - 1

(ವಿಧಾನಸಭೆ ಪ್ರಶ್ನೆ ಸಂಖ್ಯೆ 1920 - ಶ್ರೀ ಎಸ್. ರುದ್ರಪ್ಪ, ವಿಧಾನಸಭಾ ಸದಸ್ಯರು)

1991ರ ಜನಗಣತಿ ಪ್ರಕಾರ ಪರಿಶಿಷ್ಟ ವರ್ಗದವರ ಜಿಲ್ಲಾವಾರು ಜನಸಂಖ್ಯೆಯ ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆ	ಪರಿಶಿಷ್ಟ ವರ್ಗದವರ ಜನಸಂಖ್ಯೆ
1.	ಬೆಂಗಳೂರು ನಗರ	53,631
2.	ಬೆಂಗಳೂರು ಗ್ರಾಮಾಂತರ	49,305
3.	ಬೆಳಗಾಂ	83,076
4.	ಬಳ್ಳಾರಿ	1,66,693
5	ಬೀದರ್	1,04,215
6.	ಬಿಜಾಪುರ	39,535
7.	ಚಿಕ್ಕಮಗಳೂರು	26,534
8.	ಚಿತ್ರದುರ್ಗ	3,18,381
9.	ದಕ್ಷಿಣ ಕನ್ನಡ	1,06,159
10.	ಧಾರವಾಡ	1,05,099
11	ಗುಲ್ಬರ್ಗಾ	1,06,935
12	ಹಾಸನ	16,581
13	ಕೊಡಗು	40,312
14	ಕೋಲಾರ	1,53,019
15.	ಮಂಡ್ಯ	11,936
16.	ಮೈಸೂರು	1,02,102

17.	ರಾಯಚೂರು	1,80,272
18.	ಶಿವಮೊಗ್ಗ	74,106
19.	ತುಮಕೂರು	1,67,632
20.	ಉತ್ತರ ಕನ್ನಡ	10,168
	ಒಟ್ಟು	19,15,691

ಬೈಂದೂರು ಪುರಸಭೆಯ ನೀರು ಯೋಜನೆ ಮುಗಿಸಲು ಒತ್ತಾಯ

1119 (1915): ಶ್ರೀ ಜಿ.ಎಸ್. ಆಚಾರ್ (ಬೈಂದೂರು):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪುರಸಭೆಗೆ ನಲ್ಲಿ ನೀರು ಪೂರೈಸುವ ಯೋಜನೆಯ ಕಾರ್ಯಾರಂಭ ಯಾವಾಗ ಆಯಿತು, ಅದರ ಅಂದಾಜು ವೆಚ್ಚ ಎಷ್ಟು; ಕೆಲಸ ಮುಗಿಯಬೇಕಾದ ಅವಧಿ ಎಷ್ಟು;

ಆ) ಕೆಲಸ ಮುಗಿಯದೆ ಇರಲು ಕಾರಣವೇನು;

ಇ) ನಲ್ಲಿಗಳನ್ನು ಹಾಕುವಾಗ ಉಪ್ಪು ನೀರು ಪ್ರದೇಶಕ್ಕೆ ಆದ್ಯತೆ ನೀಡುವ ಬದಲು ಇತರ ಸ್ಥಳಗಳಿಗೆ ಪ್ರಾಶಸ್ತ್ಯ ನೀಡಿರುವುದು ಇದೆಯೇ; ಹಾಗಿದ್ದಲ್ಲಿ ಕಾರಣವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):-

ಅ) ಜನವರಿ 1991ರಲ್ಲಿ ಯೋಜನೆಯು ಕಾರ್ಯಾರಂಭವಾಯಿತು. ಅಂದಾಜು ವೆಚ್ಚ ರೂ. 40.00 ಲಕ್ಷಗಳು. ನವೆಂಬರ್ 1993ರಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಆ) ಬೈಂದೂರು ನೀರು ಸರಬರಾಜು ಯೋಜನೆಯ ಬಹುತೇಕ ಕಾಮಗಾರಿಗಳು ಮುಗಿದಿದ್ದು, ಅದರಲ್ಲಿ ಈ ಕೆಳಗೆ ಕಾಣಿಸಿದ ಕಾಮಗಾರಿಗಳು ಬಾಕಿ ಉಳಿದಿರುತ್ತವೆ. ಅವುಗಳೆಂದರೆ ಕೊಳವೆ ಮಾರ್ಗವು ಕೊಂಕಣ ರೈಲ್ವೆ ಮಾರ್ಗವು ಹಾದು ಹೋಗಬೇಕಾದುದ್ದರಿಂದ, ಕೊಳವೆ ಮಾರ್ಗದ ಜೋಡಣೆ ಕಾರ್ಯ ತಡವಾಯಿತು. ಈ ಯೋಜನೆಯಲ್ಲಿ ನಿರ್ಮಿಸಲು ಉದ್ದೇಶಿಸಿರುವ 9.00 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಾಗಾರ ನಿರ್ಮಾಣದ ಮೊದಲನೆ ಗುತ್ತಿಗೆದಾರರು ಕೆಲಸವನ್ನು ಬಿಟ್ಟು ಹೋದದ್ದರಿಂದ ಎರಡನೇ ಗುತ್ತಿಗೆದಾರರಿಂದ ಉಳಿಕೆ ಕೆಲಸಗಳನ್ನು ಮಾಡಿಸುವುದರಿಂದ ತಡವಾಗಿದೆ.

ಇ) ಇಲ್ಲ.

ರಾಜ್ಯದಲ್ಲಿ ಇರುವ ಪೌರಸಭೆಗಳ ಆರ್ಥಿಕ ಸ್ಥಿತಿ

1120 (2005): ಶ್ರೀ ಬಾಬುರಾವ್ ಚವಾಣ (ಶಹಬಾದ್):-

ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದಲ್ಲಿ ಇರುವ ಪುರಸಭೆಗಳು ಎಷ್ಟು ? ಆರ್ಥಿಕ ರೀತಿಯಲ್ಲಿ ಇರುವುದು ಎಷ್ಟು ಹಾಗೂ ಆರ್ಥಿಕ ಸ್ಥಿತಿ ಸರಿ ಇರಲಾರದು ಎಷ್ಟು;